<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆಃ 35/2024**

**ಸಾಕ್ಷಿಯನ್ನು ದಿಃ 09.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ.ಪಿ.ಆರ್.ಎಲ್ ವಕೀಲರಿಂದಃ**

ದಿಃ 01.05.2023 ರಂದು ನಾನು ರಾತ್ರಿ 8 ರಿಂದ ಬೆಳಿಗ್ಗೆ 8 ಗಂಟೆಯವರೆಗೆ ರಾತ್ರಿ ಪಾಳಿಯ ಕರ್ತವ್ಯದಲ್ಲಿದ್ದೆ. ಆ ದಿನ ನಾನು, ಚಾಸಾ-4 ಮತ್ತು 5 ರವರು ರಾತ್ರಿ ಪಾಳಿಯ ಕರ್ತವ್ಯದಲ್ಲಿದ್ದೆವು. ಆ ದಿನ ರಾತ್ರಿ ಕಚೇರಿಯಿಂದ ಹೊರಟು ಹುಣಸೂರು ಪಟ್ಟಣ, ವಿ.ಪಿ.ಬೋರೆ, ಹಳೇ ಸೇತುವೆ, ಕಲ್ಕುಣಿಕೆ ಸರ್ಕಲ್ ಗಳಲ್ಲಿ ಗಸ್ತು ಮಾಡಿಕೊಂಡು ಕೃತ್ಯದ ಸ್ಥಳಕ್ಕೆ ಬಂದೆವು. ಆ ದಿನ ರಾತ್ರಿ 9 ಗಂಟೆಗೆ ಕಚೇರಿಯಿಂದ ಹೊರಟೆವು. ವಿ.ಪಿ ಬೋರೆ, ಕಲ್ಕುಣಿಕೆ ಸರ್ಕಲ್ ಗಳಲ್ಲಿ ರಾತ್ರಿ ಹೆಚ್ಚಿನ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿಯಲ್ಲ. ಆ ದಿನ ನಾವು ಬಂದ ವಾಹನವನ್ನು ಚಾಸಾ-4 ರವರು ಚಲಾಯಿಸುತ್ತಿದ್ದರು. ಆ ದಿನ ಆರೋಪಿಯನ್ನು ನಾನೇ ತಡೆದಿದ್ದೇನೆ. ನಾನೇ ತಡೆದಿದ್ದೇನೆ ಎಂದು ನನ್ನ ಹೇಳಿಕೆಯಲ್ಲಿ ಮತ್ತು ದೂರಿನಲ್ಲಿ ಬರೆದಿಲ್ಲ. ಅದನ್ನು ಬರೆಸಲು ತೊಂದರೆ ಇರಲಿಲ್ಲ. ಸಾಮಾನ್ಯವಾಗಿ ಮೇಲಾಧಿಕಾರಿಗಳು ಹೇಳುವ ಕೆಲಸವನ್ನು ನಾನು ಚಾಚೂ ತಪ್ಪದೇ ಪಾಲಿಸುತ್ತೇನೆ ಎಂದರೆ ಸರಿ. ಆ ದಿನ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣ ದಾಖಲಿಸಿಲ್ಲ. ದಿಃ 01.05.2023 ರಂದು ನನ್ನ ಸಮಕ್ಷಮ ಆರೋಪಿಯ ಕಡೆಯಿಂದ ವಸ್ತುವನ್ನು ವಶಪಡಿಸಿಕೊಂಡಿದ್ದೇವೆ. ನನ್ನ ಸಮಕ್ಷಮ ಆ ದಿನ ಸ್ಥಳಮಹಜರು ಜರುಗಿಸಿದ್ದಾರೆ. ಆ ದಿನ ಸ್ಥಳಕ್ಕೆ ಪಂಚರನ್ನು ಕರೆದುಕೊಂಡು ಹೋಗಿದ್ದಿರಾ ಎಂದರೆ ಹೋಗಿದ್ದೇನೆ. ಆ ದಿನ ಚಾಸಾ-1 ಮತ್ತು 2 ರವರನ್ನು ಪಂಚರಾಗಿ ಕರೆದುಕೊಂಡು ಹೋಗಿದ್ದೆವು. ಅವರಿಗೆ ನೋಟಿಸ್ ಕೊಟ್ಟಿದ್ದೆವು. ಆ ದಿನ ಇಲಾಖಾ ಸಿಬ್ಬಂದಿಗಳಾದ ನಾವು ಪರಸ್ಪರ ಅಂಗಶೋಧನೆ ಮಾಡಿಕೊಂಡಿದ್ದೇವೆ. ಸ್ಥಳಮಹಜರನ್ನು ನಾನೇ ಬರೆದಿದ್ದೇನೆ. ಮಹಜರು ಸ್ಥಳ ಚೆಕ್ಕು ಬಂದಿ ಹೇಳುಬಲ್ಲೆ. ದಕ್ಷಿಣಕ್ಕೆ ಹುಣಸೂರು ಕಡೆಗೆ ಹೋಗುವ ರಸ್ತೆ. ದಕ್ಷಿಣದ ಕಡೆಗೆ 3 ರಸ್ತೆಗಳು ಕೂಡುವಂತಹ ಜಾಗ ಇದೆ ಎಂದರೆ ಸರಿಯಲ್ಲ. ದಕ್ಷಿಣ ದಿಕ್ಕಿನಲ್ಲಿ ಕಲ್ಕುಣಿಕ ಶನೀಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಎಂದರೆ ಸರಿಯಲ್ಲ. ಆ ದಿನ ರಾಸಾಯನಿಕ

ಪ್ರಯೋಗಾಲಯಕ್ಕೆ ಮಾದರಿಗಾಗಿ ನನ್ನ ಸಮಕ್ಷಮ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆ ದಿನ ನನ್ನ ಸಮಕ್ಷಮ ಆರೋಪಿಯ ಬಳಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿ ಪ್ರತಿದಿನ ಹಾಜರಾತಿ ಪುಸ್ತಕ ನಿರ್ವಹಿಸುತ್ತೇವೆ. ಆ ದಿನದ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದಿರಾ ಎಂದರೆ ಇಲ್ಲ. ನಾನು ಮತ್ತು ಚಾಸಾ–4 ರವರು ರಾಸಾಯನಿಕ ಪರೀಕ್ಷೆಗಾಗಿ ಮದ್ಯದ ಪೌಚ್ ಗಳನ್ನು ವಶಪಡಿಸಿಕೊಂಡೆ. ಈ ವಿಷಯವನ್ನು ಮಹಜರು ಮತ್ತು ಹೇಳಿಕೆಯಲ್ಲಿ ಬರಸಿದ್ದಿರಾ ಎಂದರೆ ಇಲ್ಲ. ಆ ದಿನ ಮಾದರಿಗಾಗಿ ಯಾವುದೇ ಮದ್ಯದ ಪೌಚ್ ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಮಾರಾಟ ಮಾಡದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಳಿ ಬಣ್ಣದ ಚೀಲವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಿರಾ ಎಂದರೆ ನಾಶಪಡಿಸಿದ್ದೇವೆ. ಆ ಬಗ್ಗೆನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿದ್ದಿರಾ ಎಂದರೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದುಕೊಂಡಿದ್ದೇವೆ . ಮು.ಮಾ–1 ರಂತಹ ಟೆಟ್ರಾ ಪ್ಯಾಕ್ ಗಳು ಎಲ್ಲಾ ಮದ್ಯದ ಅಂಗಡಿಯಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.